ಜನ' ಅನ್ನುವ ತೀರ್ಮಾನಕ್ಕೆ ಬಂದ ಮೇಲೆ ಮತ್ತೆ ತನ್ನ ನಂಬಿಕೆಗೇ ತಗುಲಿಕೊಂಡ. ಅವನ ನಿರೀಕ್ಷೆಯಂತೆ ಐತಿಹಾಸಿಕ ಮಹತ್ವಕ್ಕೆ ಭಯಂಕರ ಗೌರವ ಕೊಟ್ಟು ತಿಳಿದುಕೊಳ್ಳುವ ಪ್ರವಾಸಿಗರು ಎದುರಾಗುವುದು ಅಪರೂಪವಾದ್ದರಿಂದ ಹಳಹಳಿಕೆಯ ಸ್ಥಾಯಿಭಾವವೊಂದು ಅವನ ಮನೋಧರ್ಮದಲ್ಲಿ ಪಟ್ಟಾಗಿ ಕುಳಿತುಬಿಟ್ಟಿತ್ತು, ಅದರ ಉಪ ಉತ್ಪನ್ನವೆಂಬಂತೆ ದಿನವೂ ಸಂಜೆ ಸೂರ್ಯಾಸ್ತದ ಹೊತ್ತಿಗೆ ಬಿಡುವಾಗಿ ಕುಳಿತು ಪ್ರೀತಿಯ ಇಂಪನಿ ನುಡಿಸುವಾಗ ವಿಷಾದ... ಖೇದ ಮನಸನ್ನಾವರಿಸುತ್ತ ಸೂರ್ಯನ ಬೀಳ್ಕೊಡುಗೆಯ ಹೊತ್ತಿಗೆ ಪುರಿಯಾ ಧನಾಶ್ರೀ ಭಾವವೇ ಮುಂದೊತ್ತುತ್ತಿತ್ತು. ಅವನ ಈ ಮನೋವ್ಯಾಪಾರವೆಲ್ಲ ಅವನಿಗೂ ಅವನ ದಿನಮಣಿಗೂ, ಅಲ್ಪಸ್ವಲ್ಪ ಅವನ ಗುರು ಸದಾನಂದ ಮೂರ್ತಿಗಳಿಗೂ ಅರ್ಥವಾಗಬೇಕಲ್ಲದೆ ಬೇರೆ ಯಾರಿಗೂ ತಲೆಬುಡ ಹೋಗಲಿಕ್ಕಿಲ್ಲ. ಈಗಂತೂ ಕುಟ್ಟಿ ಹಾಕಿಕೊಂಡು ಕಳಚಿಕೊಳ್ಳುವ ಹುಳ ಇದಲ್ಲ ಅನಿಸಿತು. ಎದೆಯೊಳಗಿನ ತುಮುಲ ತುಸುವಾದರೂ ಹಗುರಾಗಬೇಕಾದರೆ ತುಂಗಭದ್ರೆಯ ಮುಂದೆ ಕುಳಿತು ಇಂಪನಿಗೆ ಉಸಿರು ತುಂಬಿ ತುಂಬಿ ಹರಿಸಬೇಕು. ಕೈಗಡಿಯಾರ ನೋಡಿದ. ಬರಬೇಕಾದ ತಂಡ ತಲುಪಲು ಕಮ್ಮಿಯೆಂದರೂ ಮುಕ್ಕಾಲು ಗಂಟೆ ಬೇಕು. ಕಿವಿಯಲ್ಲಿ ಉಸ್ತಾದ್ ಅಮೀರ್ ಖಾನರ ಪೂರಿಯಾ ಧನಾಶ್ರೀ ಮೊರೆಯಲಾರಂಭಿಸಿತು. ಬಿರಬಿರನೆ ನದಿಯತ್ತ ನಡೆದ.

ಇಂಪನಿ ಎಂದರೆ ಬಿದಿರಿನ ಏಳು ಓಟೆಗಳನ್ನು ಸೇರಿಸಿ ಮಾಡಿದ ಕೊಳಲಿನಂತಹ ವಾದ್ಯ. ಉತ್ಸವದ ಸಮಯದಲ್ಲಿ ಈಶಾನ್ಯ ಭಾರತದ ಕಡೆಯಿಂದ ಬಂದಿದ್ದವನೊಬ್ಬ ಬೀದಿಗಳಲ್ಲಿ ಓಡಾಡುತ್ತ; ಮನಸು ಬಂದಲ್ಲಿ ಕುಳಿತು ಬಾರಿಸುತ್ತ; ತಾನೇ ಮಾಡುವ ಆ ಉಪಕರಣದ ಬಗ್ಗೆ ವಿವರಿಸುತ್ತ ಅದನ್ನು ಮಾರುತ್ತಿದ್ದ. ಆ ವಾದ್ಯದ ಇಂಪಿಗೆ ಬಲಿ ಬಿದ್ದ ವೀರೇಶ ಅವನಿಂದ ಅದನ್ನು ಖರೀದಿಸಿದ್ದು ಮಾತ್ರವಲ್ಲದೆ ಅವನು ಹಂಪಿಯಲ್ಲಿರುವಷ್ಟು ದಿನ ಅವನ ಹಿಂದೆಯೇ ಸುತ್ತುತ್ತ ಅದನ್ನು ನುಡಿಸುವ ಬಗೆ ಅಭ್ಯಾಸ ಮಾಡಿದ. ಆ ಮನುಷ್ಯ ಇಂಗ್ಲಿಷ್, ಹಿಂದಿ ಮಾತಾಡುತ್ತಿದ್ದ. ಸಂಗೀತ ಬಲ್ಲವನಂತೆ ರಾಗಗಳ ಬಗ್ಗೆ ಹೇಳುತ್ತ ವೀರೇಶನಿಗೆ ಒಂದೆರಡು ರಾಗಗಳ ಹೇಳಿಕೊಟ್ಟು ಹೊಸಲೋಕ ಕಾಣಿಸಿದ್ದ. ಆತ ಹೊರಟಾಗ ಅಡ್ರೆಸ್ ಕೇಳಿದ್ದಕ್ಕೆ ವಾದ್ಯವನ್ನು ತೋರಿಸಿ ಇದೇ ಅಡ್ರೆಸ್. ಇಟ್ಟುಕೊಂಡಿರು. ಮರಳಿ ಬಂದರೆ ಮತ್ತೆ ಮಾತು ಎಂದು ಹೋದವನು ಮತ್ತೆ ಬರಲಿಲ್ಲ. ಹೆಸರು ಗೊತ್ತಿಲ್ಲದ ವಾದ್ಯ ಅವನದಾಗಿತ್ತು. ಒಮ್ಮೆ ಆತ ಅದನ್ನು ನುಡಿಸುತ್ತಿದ್ದಾಗ ಮೂರ್ತಿಗಳು, 'ಕೊಳವೆಯಿಂದ ಇಂಪಾದ ಹನಿಗಳು ಕಿವಿಯೊಳಗಿಳಿದಂತನಿಸುತ್ತದಲ್ಲೋ ವೀರೇಶ' ಅಂದಿದ್ದರು.

'ಆ ಮನುಷ್ಯ ಈ ಕೊಳವೆಯಿಂದ ಇಂಪಾದ ನಾದದ ಹನಿಗಳನ್ನು ನಂಗೆ ಕುಡಿಸಿ ಹೋದ ಗುರುಗಳೇ' ಅಂದಿದ್ದ. ಸದಾನಂದ ಮೂರ್ತಿ ಮಾತ್ರ 'ನಾದ ನಿನ್ನೊಳಗಿತ್ತು. ಅವನದನ್ನು ಎಚ್ಚರಿಸಿದ' ಅಂದಿದ್ದರು. ಅಲ್ಲಿಂದ ನಂತರ ಆ ವಾದ್ಯ ಇಂಪನಿಯಾಯಿತು.

ಮೊಬೈಲ್ ರಿಂಗಾಗುತ್ತಿರುವುದು ವೀರೇಶನ ಅರಿವಿಗೆ ಬರುವಾಗ ಅದಾಗಲೇ ಎರಡು ಮಿಸ್ಡ್ ಕಾಲ್ ತೋರಿಸುತ್ತಿತ್ತು. ಆತ ಎದುರು ನೋಡುತ್ತಿರುವ ಅವಿನಾಶನೇ ಕರೆ ಮಾಡಿದ್ದ. ಕಮಲಾಪುರ ತಲುಪಿದೆವು, ಮಹಾನವಮಿ ದಿಬ್ಬದ ಬಳಿಯೇ ಬರ್ತೀವಿ. ಆ ಕಡೆ ಮುಗಿಸಿ ಸಂಜೆ ಐದು ಗಂಟೆ ಮೇಲೆ ವಿರೂಪಾಕ್ಷ ಟೆಂಪಲ್ ಕಡೆ ಹೋಗೋಣ ಅಂದ. ಮನಸು ಶಾಂತವಾಗಿತ್ತು. ತಾನು ದಿಬ್ಬದ ಬಳಿ ತಲುಪುವ ಹೊತ್ತಿಗೆ ಅವರು ಬಂದಾಗಿರುತ್ತದೆ. ಕಾಲ್ ಗೊತ್ತಾಗದೆ ಹೋಯಿತಲ್ಲ ಅನಿಸಿದರೂ ಹೊಸ ಚೈತನ್ಯದಿಂದ ಅತಿಥಿಗಳನ್ನೆದುರುಗೊಳ್ಳಲು ಹೊರಟ ವೀರೇಶ.

* * *

ಮಹಾನವಮಿ ದಿಬ್ಬದ ಆವರಣದ ಹೊರ ಭಾಗದಲ್ಲಿ ಕಾರ್ ನಿಲ್ಲಿಸಿ ವೀರೇಶನಿಗಾಗಿ ಕಣ್ಣಾಡಿಸಿದ ಅವಿನಾಶ. ಅಲ್ಲಿದ್ದ ಎಳನೀರಿನ ಡಬ್ಬಿ ಅಂಗಡಿ ಬಳಿ



